ಸಮಾಜಕಲ್ಯಾಣ ಸಚಿವರು ಹೇಳಬೇಕು.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಗಂಗಾಕಲ್ಯಾಣ ಯೋಜನೆಯನ್ನು 1996ರ ಮೊದಲು ಜಿಲ್ಲಾ ಪಂಚಾಯಿತಿ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿತ್ತು. ಆದುದರಿಂದ, ಯಾವ ಸಂದರ್ಭದಲ್ಲಿ ಇದಾಗಿದೆಯೆಂದು ಮಾನ್ಯ ಶಾಸಕರು ನಿರ್ದಿಷ್ಟವಾಗಿ ಹೇಳಿಲ್ಲ. 1996ನೇ ವರ್ಷದ ನಂತರ ಗಂಗಾಕಲ್ಯಾಣ ಯೋಜನೆಯನ್ನು 'ಪರಿಶಿಷ್ಟ ಜಾತಿ ವರ್ಗ ಅಭಿವೃದ್ಧಿ ನಿಗಮದಿಂದ' ಮಾಡಲಾಗುತ್ತಿದೆ. ಆಮೇಲೆ, ಕಳಪೆ ದರ್ಜೆಯ ಮೋಟರ್‌ಗಳನ್ನು ಅಳವಡಿಸಲಾಗಿದೆಯೆಂದು ಸಹಾ ಹೇಳಿದ್ದಾರೆ. ಇದರ ಬಗ್ಗೆ ನಿರ್ದಿಷ್ಟವಾದ ಪ್ರಕರಣಗಳೇನಾದರೂ ಇದ್ದು, ಅದನ್ನು ಹೇಳಿದರೆ, ಆ ಕೆಲಸವನ್ನು ಜಿಲ್ಲಾ ಪಂಚಾಯಿತಿ ಮೂಲಕ ಮಾಡಿಸಿದ್ದರೂ ಅದನ್ನು ಸರಿಪಡಿಸತಕ್ಕಂಥ ಕೆಲಸವನ್ನು ಮಾಡಿಸುತ್ತೇವೆ. 1996ರಿಂದ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಕಲ್ಯಾಣ ಅಭಿವೃದ್ಧಿ ನಿಗಮದಿಂದ ಮಾಡಲಾಗುತ್ತಿರುವ ಗಂಗಾಕಲ್ಯಾಣ ಯೋಜನೆಯಲ್ಲಿ ಬಹಳ ಒಳ್ಳೆ ಗುಣಮಟ್ಟದ ಮೋಟರ್‌ಗಳನ್ನು ಅಳವಡಿಸುತ್ತಿದ್ದೇವೆ. ಇಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲ. ಒಂದು ಪಕ್ಷ ಮಾನ್ಯ ಸದಸ್ಯರು ಹೇಳಿದ ಹಾಗೆ 1996ರ ಹಿಂದೆ ಮಾಡಿದಂಥ ಕೆಲಸಗಳಲ್ಲಿ ಏನಾದರೂ ಕಳಪೆ ಇದ್ದಂಥ ಕೆಲಸಗಳಾಗಿದ್ದರೆ ನಿರ್ದಿಷ್ಟವಾದ ಪ್ರಕರಣ ಹೇಳಿದರೆ, ಅದನ್ನು ಸರಿಪಡಿಸತಕ್ಕಂಥ ಕೆಲಸವನ್ನು ಮಾಡಲಾಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ: ನನ್ನ ತಾಲ್ಲೂಕಿನಲ್ಲಿ ಆಗಿರತಕ್ಕಂಥ ಗಂಗಾಕಲ್ಯಾಣ ಯೋಜನೆಗಳೆಲ್ಲವೂ ಜಿಲ್ಲಾಪಂಚಾಯಿತಿ ಮೂಲಕವೇ ಮಾಡಲಾಗಿರುತ್ತದೆ. ದಯಮಾಡಿ ಇದರ ಮಗ್ಗೆ ಎನ್‌ಕ್ವೈರಿ ಮಾಡಿಸಬೇಕು.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ: ನಿರ್ದಿಷ್ಟವಾದ ಪ್ರಕರಣಗಳಿದ್ದರೆ ಅದನ್ನು ನಾವು ಎನ್‌ಕ್ವೈರಿ ಮಾಡಬಹುದು.

ಅಧ್ಯಕ್ಷರು: ಮಾನ್ಯ ಸದಾನಂದಗೌಡರು, ಯೋಗೀಶ್‌ಭಟ್‌ರವರು, ಯಡಿಯೂರಪ್ಪನವರು ಹಾಗೂ ಇನ್ನಿತರರು ಕೆ.ಇ.ಬಿ, ಬಗ್ಗೆ ಪ್ರಸ್ತಾಪ ಮಾಡಬೇಕೆಂದು ತಿಳಿಸಿರುವ ವಿಷಯವನ್ನು ನಾಳೆ ದಿವಸ ನಿಯಮ 69ರ ಮೇಲೆ ತೆಗೆದುಕೊಳ್ಳಲಾಗುತ್ತದೆ.

(ಉ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿದ್ಯುತ್ ಪಂಪ್‌ಸೆಟ್ಟುಗಳಿಗೆ ಒಂದು ಹಾರ್ಸ್ ಪವರ್‌ಗೆ 500 ರೂಪಾಯಿಗಳಂತೆ ವಸೂಲು ಮಾಡುತ್ತಿರುವುದು.

ಶ್ರೀ ಡಿ.ವಿ.ಸದಾನಂದ ಗೌಡ (ಪುತ್ತೂರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಎಲ್ಲಾ ವಿದ್ಯುತ್ ಪಂಪ್‌ಸೆಟ್‌ಗಳಿಗೆ ಏನು ಮಾಡಿದ್ದಾರೆಂದರೆ, ಒಂದು ಹಾರ್ಸ್ ಪವರ್‌ಗೆ 300 ರೂಪಾಯಿ ಶುಲ್ಕವನ್ನು ವಿಧಿಸಿದ್ದಾರೆ. ದಕ್ಷಿಣಕನ್ನಡ

ಜಿಲ್ಲೆಯಲ್ಲಿ ವಿಶೇಷವಾಗಿ ಏನಾಗಿದೆಯೆಂದರೆ, ಒಂದು ಹಾರ್ಸ್ ಪವರ್‌ಗೆ 300 ರೂಪಾಯಿ ವಸೂಲಿ ಮಾಡುವ ಬದಲಿಗೆ 500 ರೂಪಾಯಿಗಳಂತೆ ವಸೂಲು ಮಾಡುತ್ತಿದ್ದಾರೆ. 500 ರೂಪಾಯಿ ಕೊಡದೇ ಇದ್ದವರ ಪಂಪ್ ಹೌಸ್‌ಗಳಲ್ಲಿ ಫೀಸ್‌ನ್ನು ಕಿತ್ತು ಹಾಕಿ ಜಮೀನಿಗೆ ನೀರು ಹಾಯಿಸಲು ಸಾಧ್ಯವಿಲ್ಲದ ಹಾಗೆ ಮಾಡುತ್ತಿದ್ದಾರೆ. ಇದರಿಂದಾಗಿ ವಿಶೇಷವಾಗಿ ಅಡಿಕೆ ಬೆಳೆಗೆ ಬಹಳ ಹಾನಿಯಾಗಲು ಕಾರಣವಾಗಿದೆ. ಇದರ ಬಗ್ಗೆ ನಾವು ಜಿಲ್ಲಾ ಮಂತ್ರಿಯವರಲ್ಲಿ ಮಾತನಾಡಿದಾಗ, 300 ರೂಪಾಯಿಗಳನ್ನು ಮಾತ್ರ ವಸೂಲಿ ಮಾಡಬೇಕೆಂದು ಆದೇಶ ಕೊಟ್ಟಿದ್ದೇನೆಂದು ತಿಳಿಸಿದ್ದರು. ಆದರೆ, ಇಲಾಖೆ ಅಧಿಕಾರಿಗಳು 500 ರೂಪಾಯಿಗಳನ್ನು ವಸೂಲಿ ಮಾಡುತ್ತಿದ್ದಾರೆ.

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು): ನಮ್ಮ ಇಲಾಖೆಯಿಂದ 500 ರೂಪಾಯಿ ಕಲೆಕ್ಟ್ ಮಾಡುತ್ತಿಲ್ಲ, ಬರೀ 300 ರೂಪಾಯಿಗಳನ್ನು ಮಾತ್ರ ಕಲೆಕ್ಟ್ ಮಾಡಲಾಗುತ್ತಿದೆ.

ಶ್ರೀ ಡಿ.ವಿ.ಸದಾನಂದಗೌಡ: ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 500 ರೂಪಾಯಿಗಳನ್ನು ಕಲೆಕ್ಟ್ ಮಾಡುತ್ತಿದ್ದಾರೆ.

ಅಧ್ಯಕ್ಷರು: ಮಾನ್ಯ ಸದಸ್ಯರು ಊರಿನಿಂದ ಬಂದು ಅಲ್ಲಿರತಕ್ಕಂಥ ವಾಸ್ತವಾಂಶವನ್ನು ತಿಳಿಸಿದ್ದಾರೆ. ತಮ್ಮ ಅಧಿಕಾರಿಗಳ ಮುಖಾಂತರ ಅಲ್ಲಿ ಆ್ಯಕ್ಚುಯಲ್ ಪೊಸಿಷನ್ ಏನಿದೆಯೆಂದು ತಿಳಿದುಕೊಂಡು ನಾಳೆ ದಿವಸ ಹೇಳಿ. ಇದೇ ಕೆ.ಇ.ಬಿ.ಗೆ ಸಂಬಂಧಪಟ್ಟಂತೆ ನಾಳೆ ದಿವಸ ನಿಯಮ 69ರ ಮೂಲಕ ಡಿಸ್ಕಷನ್‌ಗೂ ಬರುತ್ತಿದೆ.

(ಊ) ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಗಳಲ್ಲಿ ತೊಗರಿಬೆಳೆಗೆ ಹಾನಿ

ಶ್ರೀ ವೈಜನಾಥ್ ಪಾಟೀಲ್: ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಯಲ್ಲಿ 1993ನೇ ಇಸವಿಯಲ್ಲಿ ಸಹ ತೊಗರಿ ಬೆಳೆಗೆ ಇವತ್ತಿನ ಪರಿಸ್ಥಿತಿಯೇ ಉಂಟಾಗಿತ್ತು. ಆ ಸಂದರ್ಭದಲ್ಲಿ ತೊಗರಿ ಬೆಳೆ ಬೆಳೆಯತಕ್ಕಂಥ ರೈತರುಗಳು ಒಂದು ಸಮ್ಮೇಳನವನ್ನು ಮಾಡಿ ಸರ್ಕಾರಕ್ಕೆ ರೆಪ್ರೆಸೆಂಟೇಷನ್ ಮಾಡಲಾಗಿತ್ತು. ಅದರಂತೆ ಆಗ ಸುಮಾರು ಹತ್ತು, ಹನ್ನೆರಡು ಕೋಟಿ ರೂಪಾಯಿಗಳನ್ನು ರಿಲೀಫ್ ಎಂದು ಸರ್ಕಾರ ಕೊಟ್ಟಿತ್ತು ಈ ಸಾರಿಯೂ ತೊಗರಿ ಬೆಳೆ ಬೆಳೆಯತಕ್ಕಂಥ ರೈತರುಗಳಿಗೆ ಅಪಾರ ಹಾನಿಯಾಗಿದೆ. ಮಾನ್ಯ ಮುಖ್ಯ ಮಂತ್ರಿಯವರು ಬೀದರ್‌ನಲ್ಲಿ ಬಂದಿದ್ದಾಗ ಒಂದು ಹೇಳಿಕೆಯನ್ನು ಕೊಟ್ಟು, ಕೇಂದ್ರ ಸರ್ಕಾರ 25 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಆದರೆ, ಅದನ್ನು ಈ ಚುನಾವಣೆ ಸಂದರ್ಭದಲ್ಲಿ ಬಿಡುಗಡೆ ಮಾಡುವ ಹಾಗೆ ಇಲ್ಲ ಎಂದು ಹೇಳಿದ್ದರು. ಆದರೆ, ಅದೇ ಸಂದರ್ಭದಲ್ಲಿ ಆಂಧ್ರಪ್ರದೇಶ ಸರ್ಕಾರದವರು ತೊಗರಿ ಬೆಳೆಯನ್ನು ಹಾಳು ಮಾಡಿಕೊಂಡಿದ್ದ ರೈತರುಗಳಿಗೆ ಒಂದು ಎಕರೆಗೆ 400 ರೂಪಾಯಿಗಳಂತೆ ಪರಿಹಾರವನ್ನು ಕೊಟ್ಟಿದ್ದರು. ದೊಡ್ಡದಾಗಿ ಲಾಸ್ ಆದಾಗ ಸರ್ಕಾರ